ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿ.ಸಿ. ಸಂಖ್ಯೆ:</u> 74/2023**

ಪ್ರ.ವ.ಬೋ.ತಾಃ 20-11-2025

ಚಾಸಾಃ 4 ಪ್ರಾಸಾಃ 4

| | |
|---|---|
| ಸಾಕ್ಷಿಯ ಹೆಸರು | ಲಕ್ಷ್ಮೀನಾರಾಯಣ |
| ತಂದೆ/ಗಂಡನ ಹೆಸರು | ನರಸಿಂಹಮೂರ್ತಿ |
| ವಯಸ್ಸು | 52 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ಹಂಧ್ರಾಳು, ಮಧುಗಿರಿ ತಾ. |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>**

ನನಗೆ ಆರೋಪಿ ಗೊತ್ತು. ಚಾಸಾ.5 ರವರು ನನ್ನ ಹೆಂಡತಿ. ನಾನು 1998 ನೇ ಸಾಲಿನಲ್ಲಿ ಬ್ಯಾಲ್ಯ ಪಂಚಾಯಿತಿಯಲ್ಲಿ ವಾಟರ್ ಮನ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. 2007 ನೇ ಸಾಲಿನಲ್ಲಿ ಬಿಲ್ ಕಲೆಕ್ಟರ್ ಆಗಿ ಪದೋನ್ನತಿ ಹೊಂದಿರುತ್ತೇನೆ. 2001 ನೇ ಸಾಲಿನಲ್ಲಿ ಸರ್ಕಾರದ ಲಿಡ್ಕರ್ ಯೋಜನೆಯಡಿ ನನಗೆ ಮನೆ ಮಂಜೂರಾಗಿತ್ತು. ಆ ಹಣದಿಂದ ಮಣ್ಣಿನ ಮನೆಯನ್ನು ಕಟ್ಟಿಕೊಂಡಿದ್ದೆನು. ಅದು ಮಳೆಯಿಂದ ಬಿದ್ದು ಹೋಗಿದ್ದು, ಆನಂತರ ನಾನು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆನು. 2009 ನೇ ಸಾಲಿನಲ್ಲಿ ಚಾಸಾ.5 ರವರ ಮೂಲಕ ಮನೆ ಮಂಜೂರಾತಿ ಕೋರಿ ಪಂಚಾಯಿತಿಗೆ ಅರ್ಜಿ ಸಲ್ಲಿಸಿದೆನು. ಆನಂತರ ಪಂಚಾಯಿತಿ ಸಭೆಯಲ್ಲಿ ತೀರ್ಮಾನವಾಗಿ 30 x 40 ಅಡಿ ನಿವೇಶನಕ್ಕೆ ಮನೆ

ಮಂಜೂರಾಯಿತು. 2013 ನೇ ಸಾಲಿನಲ್ಲಿ ನನ್ನ ಹೆಂಡತಿ ಹೆಸರಿಗೆ ಇಂದಿರಾ ಆವಾಜ್ ಯೋಜನೆಯಡಿ ರೂ.1,19,800/- ಹಣ ಮಂಜೂರಾಯಿತು. ಆ ಹಣದಿಂದ ಮನೆ ಕಟ್ಟಿಕೊಂಡಿರುತ್ತೇನೆ. ಈಗ ತೋರುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.11 ಎಂದು, ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ನಾನು ಆ ಪಂಚನಾಮೆಗೆ ದಿಃ16.06.2022 ರಂದು ಹಂದ್ರಾಳು ಗ್ರಾಮದ ನಮ್ಮ ಹಳೆಯ ಮನೆಯ ಹತ್ತಿರ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ.18 ಮತ್ತು 19 ರವರು ಇದ್ದರು. ಆಗ ಸಮಯ ಸಂಜೆ 4.00 ರಿಂದ 5.00 ಗಂಟೆ ಆಗಿತ್ತು.

**<u>ಪಾಟೀ ಸವಾಲುಃ</u>- 2 ನೇ ಆರೋಪಿಯ ಪರವಾಗಿ ಶ್ರೀ. ಆರ್.ಆರ್. ವಕೀಲರಿಂದಃ-**

2013 ನೇ ಸಾಲಿನಲ್ಲಿ ಬೋರಣ್ಣ ಎಂಬುವವರು ಬ್ಯಾಲ್ಯ ಗ್ರಾಮ ಪಂಚಾಯಿತಿಯ ಪಿ.ಡಿ.ಓ. ಆಗಿದ್ದರು. 2020-21 ನೇ ಸಾಲಿನಲ್ಲಿ 2 ನೇ ಆರೋಪಿ ಪಿ.ಡಿ.ಓ. ಆಗಿ ನೇಮಕಗೊಂಡರು.

**<u>ಪಾಟೀ ಸವಾಲುಃ</u>- 1 ನೇ ಆರೋಪಿಯ ಪರವಾಗಿ ಶ್ರೀ. ಎಸ್.ಆರ್.ಆರ್. ವಕೀಲರಿಂದಃ-**

ನಾನು ಮನೆ ಮಂಜೂರಾತಿ ಕೋರಿ ಬ್ಯಾಲ್ಯ ಪಿ.ಡಿ.ಓ.ರವರಿಗೆ ಅರ್ಜಿ ಸಲ್ಲಿಸಿದ್ದೆನು. ಯಾವುದೇ ವ್ಯಕ್ತಿಗೆ ಮನೆ ಇಲ್ಲದೇ ಇರುವ ಸಮಯದಲ್ಲಿ ಪಿ.ಡಿ.ಓ. ಮತ್ತು ಅಧ್ಯಕ್ಷರು ಸ್ಥಳ ಪರಿಶೀಲನೆ ಮಾಡಿ ವರದಿ ನೀಡುತ್ತಾರೆ ಎಂದರೆಸ ಸರಿ. ಆ ವರದಿಯ ಆಧಾರದ ಮೇಲೆ ಸಭೆ ಮಾಡಿ ಸದಸ್ಯರ ಒಪ್ಪಿಗೆ ಮೇಗೆಗೆ ಮನೆ ಮಂಜೂರು ಮಾಡುತ್ತಾರೆ ಎಂದರೆ ಸರಿ. ಬಿಲ್ ಕಲೆಕ್ಟರ್

ರವರಿಗೆ ಮನೆಗೆ ಸಂಬಂಧಪಟ್ಟ ಅರ್ಜಿ ಸ್ವೀಕರಿಸುವ ಮತ್ತು ಆ ಅರ್ಜಿಯನ್ನು ಸಭೆಯ ಮುಂದೆ ಮಂಜೂರು ಮಾಡುವ ಅಧಿಕಾರ ಇಲ್ಲ ಎಂದರೆ ಸರಿ. ಆ ಮನೆ ಮಂಜೂರಾತಿ ಕೋರಿ ಬಿಲ್ ಕಲೆಕ್ಟರ್ ರವರಿಗೆ ಅರ್ಜಿ ಸಲ್ಲಿಸಿರುವುದಿಲ್ಲ. ನನಗೆ ಸಂಬಂಧಪಟ್ಟ ಮನೆ ಮಂಜೂರು ಮಾಡುವ ಬಗ್ಗೆ 1 ನೇ ಆರೋಪಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನನ್ನ ಮನೆ ಮಂಜೂರಾತಿಗೆ ಸಂಬಂಧಪಟ್ಟ ಹಣಕ್ಕೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನಮ್ಮ ಮನೆಯ ಮಂಜೂರಾತಿಯ ಸಮಯದಲ್ಲಾಗಲೀ, ಮನೆ ಕಟ್ಟುವ ಸಮಯದಲ್ಲಾಗಲೀ ಹಾಗೂ ಮನೆ ಕಟ್ಟಲು ಹಣ ಮಂಜೂರಾದ ಸಮಯದಲ್ಲಿ 1 ನೇ ಆರೋಪಿ ನಮ್ಮ ಮನೆಯ ಬಳಿ ಬಂದಿರಲಿಲ್ಲ ಎಂದರೆ ಸರಿ. ನಮ್ಮ ಮನೆ ಮಂಜೂರಾತಿಗೂ ಹಾಗೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಈ ಬಗ್ಗೆ ಯಾರೂ ಸಹ ನಮ್ಮ ಮನೆಯ ಬಳಿ ಬಂದ, ಸ್ಥಳ ಪಂಚನಾಮೆ ಮಾಡಿಲ್ಲ, ಆ ಸಮಯದಲ್ಲಿ ನನ್ನ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಆ ಸ್ಥಳ ಪಂಚನಾಮೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಆ ದಾಖಲೆಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ